# ಕೊಳೆಯಲ್ಲೂ ಕಲೆ






**ಕಲೆ ಹೊಸ ಹೊಸ ಮಾಧ್ಯಮಗಳಲ್ಲಿ ಮೈತಳೆಯುವ ಕಾಲವಿದು. ಆದರೆ ಬೆರಳೇ ಬ್ರಷ್ ಆಗುವ, ಕ್ಯಾನ್ವಾಸ್ ಕಣ್ಮರೆಯಾಗುವ ಈ ಕಲೆಯಂತೂ ಎಲ್ಲಕ್ಕಿಂತ ವಿಭಿನ್ನ.**

■ **ಸುಭಾಸ ಯಾದವಾಡ**

ರಸ್ತೆ ಬದಿಗೆ ನಿಂತ ಯಾವುದೇ ಧೂಳು ಮೆತ್ತಿದ ವಾಹನವಿರಲಿ, ಅದು ಈ ಕಲಾವಿದನನ್ನು ಕೈಮಾಡಿ ಕರೆಯುತ್ತದೆ. ವಾಹನದ ಹೊರಮೈಯೇ ಈ ಕಲಾವಿದನ ಕ್ಯಾನ್ವಾಸ್ ಆಗುತ್ತದೆ. ಕಲಾವಿದನ ಕೈಬೆರಳುಗಳು ಕಲಾತ್ಮಕವಾಗಿ ಅಲ್ಲೆಲ್ಲ ಓಡಾಡುತ್ತವೆ. ಬಣ್ಣವಿಲ್ಲ, ಪೆನ್ಸಿಲ್ ಇಲ್ಲ, ಕುಂಚವಿಲ್ಲ.. ಅಷ್ಟೇ ಏಕೆ ಚಿತ್ರಕಲೆಯ ಯಾವ ಪರಿಕರಗಳೂ ಇಲ್ಲ. ಬರೀ ಬೆರಳಲ್ಲೇ ಮನಮೋಹಕ ಚಿತ್ರವೊಂದು ಮೈದಳೆಯುತ್ತದೆ.

ಈ ಕಲಾವಿದನ ಹೆಸರು ನಿಕಿತ. 37ರ ಹರೆಯದ ಈ ರಷ್ಯನ್ ಹುಡುಗನ ಚಾಕಚಕ್ಯತೆ ವಾಹನಗಳ ಮೇಲಿನ ಆ ಚಿತ್ರಗಳನ್ನು ನೋಡಿದಾಗ ಬೆರಗು ಹುಟ್ಟಿಸುತ್ತದೆ. ಲಾರಿಗಳ ಮೈಮೇಲೆ ಏರಿದ ಮೊಸಳೆ, ಕಡಿಮೆ ಧೂಳಿರುವ ಕಾರಿನ ಮೇಲೆ ಬಂದ ಮೀನು, ಮುಗಿದ ಕೈ, ನೀಲಿ ಹೂಗಳು, ಗೊರಿಲ್ಲಾ, ಶಾರ್ಕ್.. ಜೀವ ತಳೆಯುವುದನ್ನು ನೋಡುವುದೇ ಒಂದು ಸಂಭ್ರಮ.

ಎಲ್ಲಿ ಯಾವ ಚಿತ್ರ ಬರೆಯಬೇಕು ಎಂಬುದನ್ನು ನಿಕಿತ, ವಾಹನಗಳ ಮೇಲೆ ಅಡರಿದ ಧೂಳಿನ ಪ್ರಮಾಣವನ್ನು ನೋಡಿ ನಿರ್ಧರಿಸುತ್ತಾನಂತೆ. ಕೆಲವೊಮ್ಮೆ ಚಿತ್ರ ಬರೆಯುವ ಮುನ್ನ ವಾಹನದ ಮಾಲೀಕ/ಚಾಲಕರ ಅನುಮತಿಯನ್ನು ಪಡೆಯುತ್ತಾನೆ. ಮಾಲೀಕ/ಚಾಲಕ ಸ್ಥಳದಲ್ಲಿ ಲಭ್ಯವಿಲ್ಲದಿದ್ದರೆ, ತಾನೇ ಮುಂದಾಗಿ ಚಿತ್ರ ರಚಿಸುತ್ತಾನೆ. ಬಂದು ನೋಡಿದ ಮಾಲೀಕ/ಚಾಲಕರೂ ತಲೆದೂಗುತ್ತಾರೆ.

ರಷ್ಯಾದ ಮಾಸ್ಕೋ ನಗರದಲ್ಲೀಗ ನಿಕಿತ ಬರೆಯುವ ಚಿತ್ರಗಳದ್ದೇ ಚರ್ಚೆ. ಅಂತರ್ಜಾಲದಲ್ಲೆಲ್ಲ ಈ ಚಿತ್ರಗಳು ಹರಡಿ ವೈರಲ್ ಆಗಿವೆ. ಇನ್‌ಸ್ಟಾಗ್ರಾಂನಲ್ಲಿ ಈತನ ಚಿತ್ರಗಳನ್ನು ನೋಡಿ, ಆನಂದಿಸಿ ಬೆಂಬಲಿಸುವ ಹತ್ತು ಸಾವಿರಕ್ಕೂ ಹೆಚ್ಚು ಅಭಿಮಾನಿಗಳಿದ್ದಾರೆ.

(8ನೇ ಪುಟ ನೋಡಿ)